# ಕರಾಮುವಿ ಸುದ್ದಿ ಪತ್ರಿಕೆ

## KSOU NewsLetter

Volume: 3 Issue: 2 MARCH - APRIL 2024

ಆಂತರಿಕ ಪ್ರಸಾರಕ್ಕೆ ಮಾತ್ರ

ಸಂಪುಟ: 3 | ಸಂಚಿಕೆ: 2 | ಮಾರ್ಚ್ – ಏಪ್ರಿಲ್ 2024


# ಕರಾಮುವಿಯ 19ನೇ ವಾರ್ಷಿಕ ಘಟಿಕೋತ್ಸವ












ದಿನಾಂಕ: 02.03.2024 ರಂದು ಕರಾಮುವಿಯ ಘಟಿಕೋತ್ಸವ ಭವನದಲ್ಲಿ 19ನೇ ವಾರ್ಷಿಕ ಘಟಿಕೋತ್ಸವವನ್ನು ಆಯೋಜಿಸಲಾಯಿತು. ಈ ಘಟಿಕೋತ್ಸವದಲ್ಲಿ ರಾಜ್ಯ ಮಾಹಿತಿ ಆಯುಕ್ತ ಡಾ.ಎಚ್.ಸಿ.ಸತ್ಯನ್, ಚಿತ್ರದುರ್ಗದ ಬಾಪೂಜಿ ಸಮೂಹ ಸಂಸ್ಥೆಗಳ ಕಾರ್ಯದರ್ಶಿ ಕೆ.ಎಂ.ವೀರೇಶ್ ಮತ್ತು ಮಂಡ್ಯದ ಎಸ್.ಬಿ.ಶಿಕ್ಷಣ ಟ್ರಸ್ಟ್ ಕಾರ್ಯದರ್ಶಿ ಮೀರಾ ಶಿವಲಿಂಗಯ್ಯ ಅವರಿಗೆ ರಾಜ್ಯಪಾಲರಾದ ಥಾವರಚಂದ್ ಗೆಹ್ಲೋಟ್ ಅವರು ಗೌರವ ಡಾಕ್ಟರೇಟ್ ಪದವಿ ಪ್ರಧಾನ ಮಾಡಿದರು. ಮೂವರಿಗೆ ಪಿ.ಹೆಚ್.ಡಿ. ಪದವಿ, 29 ವಿದ್ಯಾಥಿಗಳಿಗೆ ಚಿನ್ನದ ಪದಕ ಮತ್ತು 31 ನಗದು ಬಹುಮಾನ ಹಾಗು 7,869 ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರಗಳನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಕುಲಪತಿಗಳಾದ ಪ್ರೊ. ಶರಣಪ್ಪ ವಿ.ಹಲಸೆ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಲೋಕಾಯುಕ್ತರಾದ ಬಿ.ಎಸ್.ಪಾಟೀಲ್, ಅಕಾಡೆಮಿಕ್ ಡೀನ್ ಶೈಕ್ಷಣಿಕ ಪ್ರೊ.ಲಕ್ಷ್ಮಿ, ಕುಲಸಚಿವರು(ಪರೀಕ್ಷಾಂಗ) ಪ್ರೊ.ಕೆ.ಬಿ.ಪ್ರವೀಣ ಅವರನ್ನು ಕಾಣಬಹುದು.



ಮಾನವಿಕ ವಿಷಯದ ಸ್ನಾತಕೋತ್ತರ ಪದವಿಯಲ್ಲಿ 1016, ಸ್ನಾತಕ ಪದವಿಯಲ್ಲಿ 2501, ಸಮಾಜ ವಿಜ್ಞಾನ ವಿಷಯಗಳಲ್ಲಿ 1239, ವಾಣಿಜ್ಯಶಾಸ್ತ್ರದ ವಿಷಯದ ಸ್ನಾತಕ ಪದವಿಯಲ್ಲಿ 472, ಸ್ನಾತಕೋತ್ತರ ಪದವಿಯಲ್ಲಿ 615, ನಿರ್ವಹಣಾ ಶಾಸ್ತ್ರ ವಿಷಯದಲ್ಲಿ 719, ವಿಜ್ಞಾನ ಮತ್ತು ಗ್ರಂಥಾಲಯ ಮಾಹಿತಿ ವಿಜ್ಞಾನ ವಿಷಯದಲ್ಲಿ 1304, ವಿದ್ಯಾರ್ಥಿಗಳು ಸೇರಿದಂತೆ 7869, ವಿದ್ಯಾರ್ಥಿಗಳು ಪದವಿ ಸ್ವೀಕರಿಸಿದರು.

ಸಾಧನೆಗೆ ವಯಸ್ಸಿನ ಅಂತರವಿಲ್ಲ ಎಂಬುದನ್ನು ಹಿರಿಯ ನಾಗರಿಕರೊಬ್ಬರು ಸಾಬೀತುಪಡಿಸಿದ್ದಾರೆ. ಮಂಗಳೂರು ಮೂಲದ ದೇವರಾಜ್ ಆಚಾರ್ಯ ಸಂಸ್ಕೃತ ವಿಷಯದಲ್ಲಿ 900 ಅಂಕಗಳಿಗೆ 832 ಅಂಕಗಳನ್ನು ಗಳಿಸಿ, 4ನೇ ರ್‍ಯಾಂಕ್ ಪಡೆದುಕೊಂಡು ಸ್ನಾತಕೋತ್ತರ ಪದವಿ ಪೂರೈಸಿದ್ದಾರೆ.

ಕುಲಪತಿಗಳಾದ ಪ್ರೊ.ಶರಣಪ್ಪ ವಿ.ಹಲಸೆರವರು ಮಾತನಾಡಿ, ಮುಕ್ತ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳಿಗೆ ಪೂರಕವಾದ ವಾತಾವರಣ ಕಲ್ಪಿಸಲಾಗಿದೆ. ಉತ್ತಮ ವ್ಯವಸ್ಥೆಯಿಂದಾಗಿ ದೇಶದ ಯಾವುದೇ ಮುಕ್ತ ವಿಶ್ವವಿದ್ಯಾನಿಲಯಕ್ಕೆ ನೀಡದಿರುವಷ್ಟು ಕಾರ್ಯಕ್ರಮಗಳಿಗೆ ಯುಜಿಸಿ ಮುಕ್ತ ವಿವಿಗೆ ಅನುಮತಿ ನೀಡಿದೆ. ಮುಕ್ತ ವಿವಿ ಸಿಬ್ಬಂದಿಗಳು ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಲು ಪ್ರೋತ್ಸಾಹ ನೀಡಲಾಗುತ್ತಿದೆ. ದೂರ ಶಿಕ್ಷಣ ವ್ಯವಸ್ಥೆಯ ಅಡಿಪಾಯ ಬಲಪಡಿಸಲು ಕ್ರಮ ಕೈಗೊಳ್ಳಲಾಗಿದೆ. ಮುಕ್ತ ವಿವಿಯಲ್ಲಿ 23ಕ್ಕೂ ಹೆಚ್ಚು ಅಂತರರಾಷ್ಟ್ರೀಯ ಹಾಗು ರಾಷ್ಟ್ರೀಯ ವಿಚಾರಗೋಷ್ಠಿಯ ಸಮ್ಮೇಳನ ನಡೆಸಲಾಗಿದೆ. ವಿಶೇಷಚೇತನರು ಹಾಗು ಬುಡಕಟ್ಟು ಸಮುದಾಯ ಆಭ್ಯರ್ಥಿಗಳಿಗೆ ಶುಲ್ಕದಲ್ಲಿ ರಿಯಾಯಿತಿ ನೀಡಲಾಗುತ್ತಿದೆ. ಮುಕ್ತ ವಿವಿಯಲ್ಲಿ ಕೈಗೊಂಡಿರುವ ಹಲವು ಸುಧಾರಣಾ ಕ್ರಮದಿಂದಾಗಿ 50 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿವಿಧ ಪದವಿ ಹಾಗು ಸ್ನಾತಕೋತ್ತರ ಪದವಿ ಪಡೆಯಲು ದಾಖಲಾಗಿದ್ದಾರೆ ಎಂದು ವಿವರಿಸಿದರು.

# ‘ಡಾ.ಬಿ.ಆರ್. ಅಂಬೇಡ್ಕರ್‌ರವರ ಅಭಿವೃದ್ಧಿ ದೃಷ್ಟಿಕೋನಗಳು ಹಾಗೂ ಸಮಕಾಲೀನ ಜಗತ್ತು’ ಕುರಿತು ಅಂತರಾಷ್ಟ್ರೀಯ ವಿಚಾರ ಸಂಕಿರಣ






ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ದಿನಾಂಕ:02–03–2024 ಮತ್ತು 03–03–2024ರಂದು”ಡಾ. ಬಿ.ಆರ್.ಅಂಬೇಡ್ಕರ್‌ರವರ ಅಭಿವೃದ್ಧಿ ದೃಷ್ಟಿಕೋನಗಳು ಮತ್ತು ಸಮಕಾಲೀನ ಜಗತ್ತು” ಎಂಬ ವಿಷಯದ ಮೇಲೆ ಎರಡು ದಿನಗಳ ಅಂತರರಾಷ್ಟ್ರೀಯ ಸಮ್ಮೇಳನವನ್ನು ಘಟಿಕೋತ್ಸವ ಭವನದಲ್ಲಿ ಏರ್ಪಡಿಸಲಾಗಿತ್ತು. ಸಮ್ಮೇಳನದ ಮೊದಲ ದಿನವಾದ 02–03–2024ರಂದು ಕರ್ನಾಟಕ ರಾಜ್ಯದ ಘನ ಸರ್ಕಾರದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಸಿದ್ಧರಾಮಯ್ಯರವರು ಸಮ್ಮೇಳನದ ಉದ್ಘಾಟನೆಯನ್ನು ಮಾಡಬೇಕಾಗಿತ್ತು, ಕಾರಣಾಂತರದಿಂದ ಭಾಗವಹಿಸಲು ಸಾಧ್ಯವಾಗಲಿಲ್ಲ. ಆದಕಾರಣ ಕರ್ನಾಟಕ ರಾಜ್ಯದ ಸಮಾಜ ಕಲ್ಯಾಣ ಇಲಾಖೆ ಸಚಿವರು ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಸನ್ಮಾನ್ಯ ಡಾ. ಹೆಚ್.ಸಿ. ಮಹದೇವಪ್ಪರವರು ಸಮ್ಮೇಳನವನ್ನು ಉದ್ಘಾಟಿಸಿದರು. ಈ ಸಮ್ಮೇಳನದಲ್ಲಿ ಕರ್ನಾಟಕ ರಾಜ್ಯದ ಉನ್ನತ ಶಿಕ್ಷಣ ಸಚಿವರು ಮತ್ತು ವಿ.ವಿ.ಯ ಸಮಕುಲಾಧಿಪತಿಗಳಾದ ಡಾ.ಎಂ.ಸಿ.ಸುಧಾಕರ್‌ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಈ ಸಮ್ಮೇಳನದ ಆಶಯ ಭಾಷಣಕಾರರಾಗಿ ಶ್ರೀ ಆಸಂಗ್ ವಾಂಖೇಡೆ, ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯ, ಭಾಗವಹಿಸಿದ್ದರು. ಸಮ್ಮೇಳನದ ಅಧ್ಯಕ್ಷತೆಯನ್ನು ಮಾನ್ಯ ಕುಲಪತಿಗಳಾದ ಪ್ರೊ.ಶರಣಪ್ಪ.ವಿ.ಹಲಸೆರವರು ವಹಿಸಿದ್ದರು. ಸನ್ಮಾನ್ಯ ಕುಲಸಚಿವರಾದ ಪ್ರೊ. ಕೆ.ಎಲ್.ಎನ್.ಮೂರ್ತಿರವರು ಸಮ್ಮೇಳನದಲ್ಲಿ ಭಾಗವಹಿಸಿದ ಎಲ್ಲರನ್ನೂ ಸ್ವಾಗತ ಕೋರಿದರು. ಕೇಂದ್ರದ ಸಂಯೋಜನಾಧಿಕಾರಿ/ಸಂಘಟನಾ ಕಾರ್ಯದರ್ಶಿಗಳಾದ ಡಾ.ಶಿವಕುಮಾರಸ್ವಾಮಿರವರು ಸಮ್ಮೇಳನದ ಪ್ರಾಸ್ತವಿಕ ನುಡಿಯನ್ನು ನುಡಿದರು. ಸಂಚಾಲಕರಾದ ಡಾ.ಛಾಯ. ಆರ್‌ರವರು ಕಾರ್ಯಕ್ರಮದ ನಿರೂಪಣೆ ಮಾಡಿದರು. ಈ ಸಮ್ಮೇಳನದಲ್ಲಿ ವಿಶ್ವವಿದ್ಯಾನಿಲಯದ

ಶಾಸನಬದ್ಧ ಅಧಿಕಾರಿಗಳು, ವ್ಯವಸ್ಥಾಪನ ಮಂಡಳಿಯ ಸದಸ್ಯರುಗಳು, ಮೈಸೂರು, ಚಾಮರಾಜನಗರ, ಹಾಸನ ಮತ್ತು ಮಂಡ್ಯ ಜಿಲ್ಲೆಯ ಶಾಸಕರು ಮತ್ತು ಸಂಸದರು, ಮಾಜಿ ಶಾಸಕರು ಮತ್ತು ಸಂಸದರು, ದಲಿತ ಮುಖಂಡರು ಮತ್ತು ಇತರೆ ರಾಜಕೀಯ ಗಣ್ಯ ವ್ಯಕ್ತಿಗಳು ಭಾಗವಹಿಸಿದ್ದರು.

ಈ ಸಮ್ಮೇಳನದಲ್ಲಿ ವಿ.ವಿ.ಯ ಎಲ್ಲಾ ಬೋಧಕ/ಬೋಧಕೇತರ ಸಿಬ್ಬಂದಿಗಳು, ರಾಜ್ಯ, ದೇಶ ಮತ್ತು ವಿದೇಶಗಳ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳ ಸಂಪನ್ಮೂಲ ವ್ಯಕ್ತಿಗಳು ಮತ್ತು ವಿದ್ವಾಂಸರುಗಳು ಆಗಮಿಸಿ ಡಾ.ಬಿ.ಆರ್. ಅಂಬೇಡ್ಕರ್‌ರವರ ಚಿಂತನೆಗಳ ಕುರಿತು ಪ್ರಮುಖ ಭಾಷಣ ಮತ್ತು 200 ಸಂಶೋಧನಾ ಲೇಖನಗಳನ್ನು ಮಂಡಿಸಿದ್ದಾರೆ.

ದಿನಾಂಕ:03–03–2024ರಂದು ಸಮ್ಮೇಳನದ ಸಮಾರೋಪ ಸಮಾರಂಭವನ್ನು ಸಂಜೆ 4.00ಕ್ಕೆ ಘಟಿಕೋತ್ಸವ ಭವನದಲ್ಲಿ ಏರ್ಪಡಿಸಲಾಗಿತ್ತು. ಈ ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ಸರ್ಕಾರದ ಘನತೆವೆತ್ತ ರಾಜ್ಯಪಾಲರಾದ ಗೌರವಾನ್ವಿತ ಶ್ರೀ ತಾವರ್ ಚಂದ್ ಗೆಹ್ಲೋಟ್‌ರವರು ವಹಿಸಿದ್ದರು. ಈ ಸಮಾರಂಭದ ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯದ ಉನ್ನತ ಶಿಕ್ಷಣ ಸಚಿವರು ಮತ್ತು ವಿ.ವಿ.ಯ ಸಮಕುಲಾಧಿಪತಿಗಳಾದ ಡಾ.ಎಂ.ಸಿ.ಸುಧಾಕರ್ ರವರು ಭಾಗವಹಿಸಿದ್ದರು. ಈ ಸಮ್ಮೇಳನದ ಸಮಾರೋಪ ನುಡಿಯನ್ನು ಪ್ರೊ. ಯಗತಿ ಚಿನ್ನರಾವ್, ಪ್ರಾಧ್ಯಾಪಕರು, ಜೆ.ಎನ್.ಯು, ನವದೆಹಲಿ ನೀಡಿದರು. ಮಾನ್ಯ ಕುಲಪತಿಗಳಾದ ಪ್ರೊ.ಶರಣಪ್ಪ.ವಿ.ಹಲಸೆ ರವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಗಣ್ಯರನ್ನು ಸ್ವಾಗತಿಸಿದರು. ಕರಾಮುವಿಯ ಸನ್ಮಾನ್ಯ ಕುಲಸಚಿವರಾದ ಪ್ರೊ.ಕೆ.ಎಲ್.ಎನ್.ಮೂರ್ತಿ ರವರು ಉಪಸ್ಥಿತರಿದ್ದರು. ಕೇಂದ್ರದ ಸಂಯೋಜನಾಧಿಕಾರಿ/ಸಂಘಟನಾ ಕಾರ್ಯದರ್ಶಿಗಳಾದ ಡಾ.ಶಿವಕುಮಾರಸ್ವಾಮಿರವರು ಭಾಗವಹಿಸಿದ್ದ ಗಣ್ಯರನ್ನು ವಂದಿಸಿದರು ಮತ್ತು ಸಮ್ಮೇಳನಕ್ಕೆ ಸಹಕಾರವನ್ನು ನೀಡಿದ ಎಲ್ಲರಿಗೂ ವಂದನೆಯನ್ನು ಸಲ್ಲಿಸಿದರು. ಸಂಚಾಲಕರಾದ ಡಾ.ಛಾಯ.ಆರ್‌ರವರು ಕಾರ್ಯಕ್ರಮದ ನಿರೂಪಣೆಯನ್ನು ನಡೆಸಿಕೊಟ್ಟರು.



# ಮಹಿಳಾ ದಿನಾಚರಣೆ






ದಿನಾಂಕ:20.03.2024ರಂದು ಕಾವೇರಿ ಸಭಾಂಗಣದಲ್ಲಿ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಕುಲಪತಿಗಳಾದ ಪ್ರೊ.ಶರಣಪ್ಪ ವಿ.ಹಲಸೆ ಅವರು ಕರಾಮುವಿಯ ಸಿಬ್ಬಂದಿಗಳಿಗೆ ಮಹಿಳಾ ದಿನಾಚರಣೆಯ ಶುಭಾಶಯ ಕೋರಿದರು. ಮುಖ್ಯ ಅತಿಥಿಯಾಗಿ ಪ್ರೊ.ಎನ್. ಕೆ.ಲೋಲಾಕ್ಷಿರವರು ಆಗಮಿಸಿದರು. ಈ ಸಂದರ್ಭದಲ್ಲಿ ಡೀನ್(ಶೈಕ್ಷಣಿಕ) ಪ್ರೊ.ಎನ್.ಲಕ್ಷ್ಮಿ, ಪರೀಕ್ಷಾಂಗ ಕುಲಸಚಿವರಾದ ಪ್ರೊ.ಕೆ.ಬಿ.ಪ್ರವೀಣ, ಡೀನ್(ಅಧ್ಯಯನ ಕೇಂದ್ರ) ಪ್ರೊ.ಎಂ.ರಾಮನಾಥಂ ನಾಯುಡು ಹಾಗು ಕರಾಮುವಿಯ ಸಿಬ್ಬಂದಿ ವರ್ಗದವರು ಹಾಜರಿದ್ದರು.

# Two Days National Conference on "Sustainable Development and Innovative Management Practices"







The Department of Studies and Research in Management had organised National Conference on "Sustainable Development and Innovative Management Practices" on 5th and 6th March, 2024 at Kaveri Hall, Karnataka State Open University, Mysore. Conference research papers were called to bring together Academicians, Scholars, Professionals and Experts to explore and discuss critical issues of the conference theme "Sustainable Development and Innovative Management Practices".

The Inauguration of the National Conference on 5th March held at 10.30pm by lighting the lamp at the Kaveri hall, KSOU, Mysore. The Conference was inaugurated by Prof.K.S.Rangappa, Former Vice Chancellor, KSOU and Mysore University. The keynote speaker of the Inagural Session was Prof.M.S.Subhas, Former Vice Chancellor, Vijayanagara Sri Krishnadevaraya University, Ballari. The Chief Guest of the session was Vinayak Hegde, Head, Infosys Development Center and Mysore. The conference session was presided by Prof.V.Sharanappa.V.Halse, Honorable Vice Chancellor, KSOU and further the Inagural Session was held in presence



of Honorable Board of Management members and Statutory Officers, KSOU. Dr.Savitha.P Organising Secretary and Chairperson, DoS&R in Management cordially invited all the delegates and participants to the National Conference.

The conference sub-themes were given under the specialization General Management, Finance, Human Resource, Information Technology, Marketing, Operations and Corporate Law. The total number of full papers received in the conference was around 80 and total number of registration was around 140. In the conference totally four technical sessions were conducted and each session was engaged with Chairperson of the session, Keynote Speaker of the session and the Session Co-Chair, to give the input on the topic presented.

## ಬಾಬು ಜಗಜೀವನ್‌ರಾಮ್‌ರವರ 117ನೇ ಜನ್ಮದಿನಾಚರಣೆ





ದಿನಾಂಕ: 05.04.2023 ರಂದು ಬಾಬು ಜಗಜೀವನ್‌ರಾಮ್ ರವರ 117ನೇ ಜನ್ಮದಿನಾಚರಣೆಯನ್ನು ಮೈಸೂರು ನಗರ ರೈಲ್ವೆ ನಿಲ್ದಾಣದ ವೃತ್ತದಲ್ಲಿರುವ ಬಾಬು ಜಗಜೀವನ್‌ರಾಮ್ ಪ್ರತಿಮೆಗೆ ಕುಲಪತಿಗಳಾದ ಪ್ರೊ. ಶರಣಪ್ಪ ವಿ. ಹಲಸೆ ಅವರು ಮಾಲಾರ್ಪಣೆ ಮಾಡಿದರು. ನಂತರ ಕರಾಮುವಿಯಲ್ಲಿ ಬಾಬು ಜಗಜೀವನ್‌ರಾಮ್ ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಆಚರಿಸಲಾಯಿತು ಈ ಸಂದರ್ಭದಲ್ಲಿ ಡೀನ್(ಶೈಕ್ಷಣಿಕ) ಪ್ರೊ. ಎನ್.ಲಕ್ಷ್ಮಿ, ಕುಲಸಚಿವರಾದ ಪ್ರೊ.ಕೆ.ಬಿ.ಪ್ರವೀಣ, ಡೀನ್(ಅಧ್ಯಯನ ಕೇಂದ್ರ) ಪ್ರೊ.ಎಂ.ರಾಮನಾಥಂ ನಾಯುಡು ಹಾಗು ಬಾಬು ಜಗಜೀವನ್ ರಾಮ್ ಅಧ್ಯಯನ ಪೀಠದ ಸಂಯೋಜನಾಧಿಕಾರಿಗಳಾದ ಡಾ.ಶರಣಮ್ಮರವರು ಹಾಗು ಕರಾಮುವಿಯ ಸಿಬ್ಬಂದಿ ವರ್ಗದವರು ಹಾಜರಿದ್ದರು.

## ಡಾ.ಬಿ.ಆರ್.ಅಂಬೇಡ್ಕರ್ ಅವರ 133ನೇ ಜನ್ಮ ದಿನಾಚರಣೆ



ದಿನಾಂಕ:14.04.2023ರಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ಸಂವಿಧಾನ ಶಿಲ್ಪಿ ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ 133ನೇ ಜನ್ಮ ದಿನಾಚರಣೆಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಡಾ.ಬಿ.ಆರ್.ಅಂಬೇಡ್ಕರ್ ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಆಚರಿಸಲಾಯಿತು. ಈ ಸಂದರ್ಭದಲ್ಲಿ ಕುಲಸಚಿವರಾದ ಪ್ರೊ. ಕೆ.ಬಿ.ಪ್ರವೀಣ, ಡೀನ್(ಶೈಕ್ಷಣಿಕ) ಪ್ರೊ.ಎನ್.ಲಕ್ಷ್ಮಿ, ಪ್ರೊ.ಹೆಚ್.ವಿಶ್ವನಾಥ್ ಕುಲಸಚಿವರು(ಪರೀಕ್ಷಾಂಗ), ಅಂಬೇಡ್ಕರ್ ಅಧ್ಯಯನ ಪೀಠದ ಸಂಯೋಜನಾಧಿಕಾರಿ ಡಾ.ಶಿವಕುಮಾರಸ್ವಾಮಿ, ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ವಿಭಾಗದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ಹಾಗು ಕರಾಮುವಿಯ ಸಿಬ್ಬಂದಿ ವರ್ಗದವರು ಹಾಜರಿದ್ದರು.

## ಶ್ರೀ ಜಗಜ್ಯೋತಿ ಭಕ್ತಿಭಂಡಾರಿ ಬಸವಣ್ಣ ಜನ್ಮದಿನಾಚರಣೆ





ದಿನಾಂಕ: 28.04.2023 ರಂದು ಶ್ರೀ ಜಗಜ್ಯೋತಿ ಭಕ್ತಿಭಂಡಾರಿ ಬಸವಣ್ಣನವರ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಕುಲಸಚಿವರಾದ ಪ್ರೊ.ಕೆ.ಬಿ. ಪ್ರವೀಣ, ಉಪಕುಲಸಚಿವರಾದ ಚಂದ್ರೇಶ್.ಆರ್, ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ವಿಭಾಗದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ಹಾಗು ಕರಾಮುವಿಯ ಸಿಬ್ಬಂದಿ ವರ್ಗದವರು ಹಾಜರಿದ್ದರು.

## ಕುಲಸಚಿವರ ಪರಿಚಯ

**ಪ್ರಸ್ತುತ ಕರಾಮುವಿಯಲ್ಲಿ ಮಾರ್ಚ್ 16, 2024ರಿಂದ ಕುಲಸಚಿವರಾಗಿ (ಆಡಳಿತ) ಅಧಿಕಾರ ಸ್ವೀಕರಿಸಿದ್ದಾರೆ.**

**ಪ್ರೊ. ಕೆ. ಬಿ. ಪ್ರವೀಣ**
ಎಂ.ಎಸ್ಸಿ., ಎಂ.ಎ., ಪಿ.ಹೆಚ್.ಡಿ.,



ಪ್ರೊ.ಕೆ.ಬಿ.ಪ್ರವೀಣ ಮೈಸೂರು ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ಪ್ರಾಧ್ಯಾಪಕರು, ಉತ್ತಮ ಆಡಳಿತಗಾರರು. ಪ್ರತಿಷ್ಠಿತ ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಎಂ.ಎಡ್., ಪದವಿಯನ್ನು ಪಡೆದಿದ್ದಾರೆ. ಅಲ್ಲದೇ ಎಂ.ಎಸ್ಸಿ., ಮನೋವಿಜ್ಞಾನ, ಎಂ.ಎ., ಇತಿಹಾಸ, ಎಂ.ಎ., ಆಂಗ್ಲಸಾಹಿತ್ಯ ಜೊತೆಗೆ ಪಿ.ಹೆಚ್.ಡಿ, ಪದವಿಯನ್ನು ಶಿಕ್ಷಣಶಾಸ್ತ್ರದಲ್ಲಿ ಪಡೆದ ಹೆಗ್ಗಳಿಕೆ ಇವರದು. ಸ್ನಾತಕೋತ್ತರ ಬೋಧನೆಯಲ್ಲಿ ಇಪ್ಪತ್ತೈದು ವರ್ಷಗಳ ಸೇವಾ ಅನುಭವ ಹೊಂದಿರುವ ಇವರು ನಾಡಿನ ಶ್ರೇಷ್ಠ ಹಿರಿಯ ಶಿಕ್ಷಣ ತಜ್ಞರಲ್ಲಿ ಒಬ್ಬರಾಗಿದ್ದಾರೆ. ಬೋಧನೆ, ಸಂಶೋಧನೆ, ಆಡಳಿತ, ಹೀಗೆ ಶಿಕ್ಷಣರಂಗದಲ್ಲಿ ತನ್ನದೇ ಆದ ವಿಶೇಷ ವ್ಯಕ್ತಿತ್ವವನ್ನು ಹೊಂದಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಹದಿನಾಲ್ಕು ವಿದ್ಯಾರ್ಥಿಗಳು ಪಿ.ಎಚ್.ಡಿ, ಪದವಿಯನ್ನು ಮತ್ತು ಎಂಭತ್ತೈದು ವಿದ್ಯಾರ್ಥಿಗಳು ಎಂ.ಇಡಿ., ಪದವಿ ಪಡೆದಿದ್ದಾರೆ. ಶಿಕ್ಷಣಶಾಸ್ತ್ರದ ವಿಷಯ ಕೇಂದ್ರಿತವಾದ ಐದು ಪರಾಮಾರ್ಶನ ಗ್ರಂಥಗಳನ್ನು ರಚಿಸಿದ್ದಾರೆ. ಅರವತ್ತೈದಕ್ಕೂ ಹೆಚ್ಚು ಸಂಶೋಧನ ಲೇಖನಗಳನ್ನು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಪ್ರಕಟಿಸಿದ್ದಾರೆ. ಜೊತೆಗೆ ತೊಂಭತ್ತಕ್ಕೂ ಅಧಿಕ ಸಂಶೋಧನ ಲೇಖನಗಳನ್ನು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ವಿಚಾರಸಂಕಿರಣಗಳಲ್ಲಿ ಮಂಡಿಸಿದ್ದಾರೆ. ಇವರು ಆದರ್ಶ ಪ್ರಾಧ್ಯಾಪಕರಾಗಿ ವಿಭಾಗದ ಮುಖ್ಯಸ್ಥರಾಗಿ, ಶೈಕ್ಷಣಿಕ ಮಂಡಳಿ ಸದಸ್ಯರಾಗಿ, ಹಲವಾರು ವಿಶ್ವವಿದ್ಯಾನಿಲಯದ ಅಧ್ಯಯನ ಮಂಡಳಿ ಹಾಗು ಪರೀಕ್ಷಾ ಮಂಡಳಿ ಸದಸ್ಯರಾಗಿ, ಮುಖ್ಯಸ್ಥರಾಗಿ ಅಗಾಧವಾದ ಅನುಭವಹೊಂದಿದ್ದಾರೆ. ಅಲ್ಲದೇ ಮೈಸೂರು ವಿಶ್ವವಿದ್ಯಾನಿಲಯದ ಕೆ–ಸೆಟ್ ಪರೀಕ್ಷೆಯ ವೀಕ್ಷಕರಾಗಿ, ಕಾಲೇಜು ಅಂಗಸಂಸ್ಥೆಗಳ ಆಯ್ಕೆ ಸಮಿತಿಯ ಅಧ್ಯಕ್ಷರಾಗಿ, ಬಿ.ಎಡ್, ಶಿಕ್ಷಣದ ಎಂ.ಎ.ಎ.ಸಿ, ಸಮಿತಿಯ ಅಧ್ಯಕ್ಷರಾಗಿ, ಬಿ.ಇಡಿ ಮತ್ತು ಎಂ.ಇಡಿ ಶಿಕ್ಷಣದ ಪಠ್ಯಕ್ರಮ ರಚನೆಸಮಿತಿಯ ಸದಸ್ಯರಾಗಿ, ಭಾರತ ಮತ್ತು ಶ್ರೀಲಂಕ ದೇಶಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಶಿಕ್ಷಣಗಳ ಪರೀಕ್ಷಾ ಮುಖ್ಯ ಪರಿವೀಕ್ಷಕರಾಗಿ ಕಾರ್ಯನಿರ್ವಹಿಸಿದ್ದಾರೆ. ನಾಡಿನಾದ್ಯಂತ ಅಂದಾಜು ಇನ್ನೂರಕ್ಕೂ ಹೆಚ್ಚು ವಿಶೇಷ ಉಪನ್ಯಾಸಗಳನ್ನು ನೀಡಿದ್ದಾರೆ. ಇವರು ನಿಕಟಪೂರ್ವದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷಾಂಗ ಕುಲಸಚಿವರಾಗಿ ಸರಿಸುಮಾರು 2 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ.

## ಕುಲಸಚಿವರು (ಪರೀಕ್ಷಾಂಗ)ರವರ ಪರಿಚಯ

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷಾಂಗ ವಿಭಾಗದ ಕುಲಸಚಿವರಾಗಿ ಮಾರ್ಚ್ 06 2024 ರಂದು ಅಧಿಕಾರ ಸ್ವೀಕರಿಸಿದ್ದಾರೆ.**

**ಪ್ರೊ. ಹೆಚ್.ವಿಶ್ವನಾಥ್**
ಎಂ.ಎ., ಪಿ.ಎಚ್.ಡಿ.,



ಡಾ.ವಿಶ್ವನಾಥ್.ಹೆಚ್ ಅವರು ಬೆಂಗಳೂರು ವಿಶ್ವವಿದ್ಯಾನಿಲಯ ಕನ್ನಡ ಸಾಹಿತ್ಯದಲ್ಲಿ ಎಂ.ಎ, ಹಾಗು ಪಿ.ಹೆಚ್.ಡಿ., ಪದವಿ ಪಡೆದಿದ್ದಾರೆ. ಭಾಷೆ, ಸಾಹಿತ್ಯ, ಜಾನಪದ, ಹೀಗೆ ಹಲವು ಅಧ್ಯಯನ ಶಿಸ್ತುಗಳಲ್ಲಿ ಅಪಾರವಾದ ಸೇವೆ ಸಲ್ಲಿಸುತ್ತಿದಾರೆ. ಸಂಶೋಧನೆ, ಸಂಘಟನೆ, ಅಧ್ಯಯನ ಹಾಗು ಆಡಳಿತದಲ್ಲಿ ತೊಡಗಿಸಿಕೊಂಡಿದ್ದಾರೆ. ಹತ್ತಾರು ಸಂಶೋಧಕರಿಗೆ ಎಂ.ಫಿಲ್., ಮತ್ತು ಪಿ.ಹೆಚ್.ಡಿ, ವರದಿಯ ಮಾರ್ಗದರ್ಶಕರಾಗಿದ್ದಾರೆ. ಕನ್ನಡ ಸಾಹಿತ್ಯ ಲೋಕಕ್ಕೆ ವಿಶೇಷವಾದ ಹದಿನೈದು ಕೃತಿಗಳನ್ನು ನೀಡಿರುವ ಶ್ರೇಯಸ್ಸು ಇವರದಾಗಿದೆ. ಜೊತೆಗೆ ಐವತ್ತಕ್ಕೂ ಅಧಿಕವಾದ ಸಂಶೋಧನ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ. ಮೇಲಾಗಿ ಒಬ್ಬರು ಆದರ್ಶ ಪ್ರಾಧ್ಯಾಪಕರಾಗಿ, ವಿಭಾಗದ ಮುಖ್ಯಸ್ಥರಾಗಿ, ಶೈಕ್ಷಣಿಕ ಮಂಡಳಿಯ ಸದಸ್ಯರಾಗಿ, ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾಗಿ, ಡಾ.ಬಾಬುಜಗಜೀವನ್ ರಾವ್ ಪೀಠದ ಅಧ್ಯಕ್ಷರಾಗಿ, ದಾವಣಗೆರೆ ವಿಶ್ವವಿದ್ಯಾನಿಲಯದ ಅಧ್ಯಾಪಕರ ಸಂಘದ ಅಧ್ಯಕ್ಷರಾಗಿ, ಕನ್ನಡ ಜಾನಪದ ಪರಿಷತ್ತಿನ ಅಧ್ಯಕ್ಷರಾಗಿ, ಹೀಗೆ ಹತ್ತು ವಿವಿಧ ಶೈಕ್ಷಣಿಕ, ಸಾಂಸ್ಕೃತಿಕರಂಗದ ಅಧಿಕಾರವನ್ನು ಉತ್ತಮವಾಗಿ ನಿರ್ವಹಿಸಿಕೊಂಡು ಬಂದಿದ್ದಾರೆ. ಕನ್ನಡ ಭಾಷೆ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹಲವು ರಾಷ್ಟ್ರ ಮಟ್ಟದ ವಿಚಾರ ಸಂಕಿರಣ ಗೋಷ್ಠಿಗಳಲ್ಲಿ ಹಾಗು ಕಾರ್ಯಗಾರಗಳಲ್ಲಿ ವಿದ್ವತ್‌ಪೂರ್ಣವಾದ ಸಂಶೋಧನ ಲೇಖನಗಳನ್ನು ಮಂಡಿಸಿದ್ದಾರೆ. ನಾಡಿನಾದ್ಯಂತ ಸಂಪನ್ಮೂಲವ್ಯಕ್ತಿಯಾಗಿ ಅನೇಕ ಕಾರ್ಯಕ್ರಮಗಳಲ್ಲಿ ಕನ್ನಡ ನಾಡು–ನುಡಿ ಬಗೆಗೆ ವಿಶೇಷ ಉಪನ್ಯಾಸ ನೀಡಿದ್ದಾರೆ. ಇವರ ಈ ಸೇವೆಯನ್ನು ಗುರುತಿಸಿ ಸಹಜವಾಗಿಯೇ ರಾಜ್ಯಮಟ್ಟದ ಶಿಕ್ಷಣಶ್ರೀ ಪ್ರಶಸ್ತಿ, ದಾವಣಗೆರೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಬಸವಣ್ಣ ಪುರಸ್ಕಾರ, ದಶಮಾನೋತ್ಸವ ಪ್ರಶಸ್ತಿ, ಹೀಗೆ ಹತ್ತಾರು ಪ್ರಶಸ್ತಿಗಳಿಗೆ, ಗೌರವಕ್ಕೆ ಭಾಜನರಾಗಿದ್ದಾರೆ. ಮೂಲತ ದಾವಣಗೆರೆ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಪ್ರಾಧ್ಯಾಪಕರಾಗಿ

ಸೇವೆಸಲ್ಲಿಸುತ್ತಿರುವ ಇವರು ಪ್ರಸ್ತುತ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕುಲಸಚಿವ (ಪರೀಕ್ಷಾಂಗ) ಹುದ್ದೆಯಲ್ಲಿ ಮಾರ್ಚ್ 06, 2024 ರಿಂದ ಅಧಿಕಾರ ಸ್ವೀಕರಿಸಿದ್ದಾರೆ.

# ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿತವಾಗಿರುವ ದೃಶ್ಯ ಸ್ಟುಡಿಯೋ



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಸ್ಥಾಪಿತವಾಗಿರುವ ದೃಶ್ಯ ಸ್ಟುಡಿಯೋ ಒಂದು ಸುಂದರ ದೃಶ್ಯ ಮಾಧ್ಯಮದ ಸ್ಟುಡಿಯೋವಾಗಿದ್ದು ಇಲ್ಲಿ ಉಪನ್ಯಾಸಕರು ಪ್ರಾಧ್ಯಾಪಕರು ಉಪನ್ಯಾಸ ನೀಡುವುದಕ್ಕೆ ಆನ್ಲೈನ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಹಾಗೆಯೇ ವಿದ್ಯಾರ್ಥಿಗಳು ಹೆಚ್ಚಿನ ವಿಷಯವನ್ನು ತಿಳಿದುಕೊಳ್ಳುವುದಕ್ಕೆ ಉಪನ್ಯಾಸ ಮಾಲಿಕೆಯನ್ನು ಲೈವ್ ಟೆಲಿಕಾಸ್ಟ್ ಮಾಡುವುದಕ್ಕೆ ಉಪಯೋಗವಾಗಿದೆ. ವಿಷುವಲ್ ಸ್ಟುಡಿಯೋ ಅಥವಾ ದೃಶ್ಯ ಸ್ಟುಡಿಯೋ ಅತ್ಯಾಧುನಿಕ ತಂತ್ರಜ್ಞಾನವನ್ನು ಹೊಂದಿದ್ದು, ಈಗಾಗಲೇ ಯುಟ್ಯೂಬ್ ಚಾನೆಲ್ KSOU ದೃಶ್ಯ ವಾಹಿನಿ ತೆರೆದು ಅದರಲ್ಲಿ 24x7 ಪಾಠ ಹಾಗು ಇನ್ನಿತರ ಶೈಕ್ಷಣಿಕ ವಿಷಯಗಳನ್ನು ದೃಶ್ಯ ರೂಪದಲ್ಲಿ ಪ್ರಸಾರ ಮಾಡುತ್ತಾ ಬಂದಿದೆ.

ದೃಶ್ಯ ಸ್ಟುಡಿಯೋ ವಿಭಾಗವು ಮಾನ್ಯ ಕುಲಪತಿಗಳು ಹಾಗು ಮಾನ್ಯ ಕುಲಸಚಿವರ ಮಾರ್ಗದರ್ಶನದಲ್ಲಿ ಹತ್ತು ಹಲವು ವಿದ್ಯಾರ್ಥಿ ಸ್ನೇಹಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ.

1) ನಮ್ಮದೇ ಆದ ಯುಟ್ಯೂಬ್ ಚಾನೆಲ್ KSOU ದೃಶ್ಯ ವಾಹಿನಿಯಲ್ಲಿ ಹಲವು ಶೈಕ್ಷಣಿಕ ಕಾರ್ಯಕ್ರಮಗಳನ್ನು ವಿಡಿಯೋ ರೂಪದಲ್ಲಿ ಬಿತ್ತರಿಸಲಾಗುತ್ತಿದೆ.
2) ಉಪನ್ಯಾಸಕರುಗಳು, ಅಧ್ಯಾಪಕರುಗಳು ಹಾಗು ನುರಿತ ವಿಷಯ ತಜ್ಞರಿಂದ ವಿಡಿಯೋ ಪಾಠಗಳನ್ನು ಸಿದ್ಧಪಡಿಸಲಾಗಿದೆ.
3) ಜನವರಿ ಆವೃತ್ತಿ ಹಾಗು ಜುಲೈ ಆವೃತ್ತಿಗೆ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯುವಂತೆ, ದೃಶ್ಯ ಸ್ಟುಡಿಯೋ ವಿಭಾಗದಿಂದ ಜಾಹಿರಾತು ತಯಾರಿಸಿ ರಾಜ್ಯಾದ್ಯಂತ ಶೈಕ್ಷಣಿಕ ಪ್ರಚಾರ ನಡೆಸಿ, ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಅರಿವು ಮೂಡಿಸಿ ವಿದ್ಯಾರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶಾತಿ ಕಡೆ ಸೆಳೆಯಲಾಯಿತು. ಇದರಿಂದ ಜನವರಿ ಆವೃತ್ತಿ ಹಾಗು ಜುಲೈ ಆವೃತ್ತಿಯಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶಾತಿ ಪಡೆದಿರುವುದು ದೃಶ್ಯ ಸ್ಟುಡಿಯೋನ ಕಾರ್ಯ ವೈಖರಿಯನ್ನು ತೋರಿಸುತ್ತದೆ.
4) ಜನವರಿ ಆವೃತ್ತಿ ಹಾಗು ಜುಲೈ ಆವೃತ್ತಿಯಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗಾಗಿ, ನೇರವಾಗಿ ನಮ್ಮದೇ ಆದ KSOU ದೃಶ್ಯ ವಾಹಿನಿಯಲ್ಲಿ ಬಿತ್ತರಿಸುತ್ತಾ Induction Programme ನಡೆಸುತ್ತಾ ಬಂದಿದೆ ಇದರಿಂದ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗಿದೆ.
5) ಇ– Content Programmeಗಳು.
6) ಸೆಮಿನಾರ್ ಮತ್ತು ವೆಬಿನಾರ್‌ಗಳು.
7) ವಿಶ್ವವಿದ್ಯಾನಿಲಯದಲ್ಲಿ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನಗಳನ್ನು ಚಿತ್ರೀಕರಣ ಮಾಡಿ ನಮ್ಮದೇ ಯುಟ್ಯೂಬ್ ಚಾನೆಲ್ ಆದ KSOU ದೃಶ್ಯ ವಾಹಿನಿಯಲ್ಲಿ ಬಿತ್ತರಿಸಲಾಗುತ್ತಿದೆ.
8) ಹೊಸದಾಗಿ ಪ್ರಾರಂಭವಾದ ಆನ್ಲೈನ್ ಕೋರ್ಸ್‌ಗಾಗಿ ಪ್ರತಿಯೊಂದು ಶೈಕ್ಷಣಿಕ ಕಾರ್ಯಕ್ರಮಗಳ ಕುರಿತು ವಿಡಿಯೋ ಪಾಠಗಳ ತಯಾರಿ ನಡೆಸುತ್ತಿರುವುದು ಈಗಾಗಲೇ ಪಾಠಗಳು ಅಲ್ಲದೇ ಶುರುವಾಗಿದೆ. ಅಧ್ಯಾಪಕರುಗಳಿಂದ ಪಾಠ ಭೋದಿಸಲು ವೇಳಾಪಟ್ಟಿಯನ್ನು ಸಿದ್ಧ ಪಡಿಸಿ ಎಲ್ಲರನ್ನೂ ಆಹ್ವಾನಿಸಲಾಗಿದೆ. ಈಗ ಪಾಠಗಳು ನಡೆಯುತ್ತಿವೆ.
9) ವಿಶ್ವವಿದ್ಯಾನಿಲಯದಲ್ಲಿ ನಡೆಯುವ ರಾಷ್ಟ್ರೀಯ ಹಬ್ಬಗಳು ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳ ಚಿತ್ರೀಕರಣ ಹಾಗು ಯುಟ್ಯೂಬ್ ಚಾನೆಲ್‌ನಲ್ಲಿ ಬಿತ್ತರಿಸುವುದು ಹಾಗು ಎಲ್‌ಇಡಿ ವಾಲ್‌ನಲ್ಲೂ ಕೂಡ ಅದನ್ನು ಬಿತ್ತರಿಸಲಾಗುವುದು.
10) ನಾಡಿನ ಹೆಸರಾಂತ ಸಾಹಿತಿಗಳು ಮಾನವತವಾದಿಗಳು, ದಾಸಶ್ರೇಷ್ಠರು, ಮಹಾತ್ಮರು ಹೀಗೆ ಹಲವು ವಿಷಯಗಳನ್ನು ಕುರಿತು ಸಾಕ್ಷ್ಯಚಿತ್ರ ತಯಾರಿಸಿ ಪ್ರದರ್ಶನ ನೀಡುವುದು.
11) KAS ಮತ್ತು IAS ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಶಿಬಿರದ ಮಾಹಿತಿ ಹಾಗು ಪರೀಕ್ಷಾ ತಯಾರಿಯ ಬಗ್ಗೆ ನುರಿತ ತಜ್ಞರಿಂದ ಮಾಹಿತಿ ಒದಗಿಸುವುದು.
12) KSET ಮತ್ತು NET ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಯ ಬಗ್ಗೆ ಮಾಹಿತಿ, ಜೊತೆಗೆ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವ ವಿದ್ಯಾರ್ಥಿಗಳಿಗಾಗಿ ವಿಡಿಯೋ ಪಾಠ ನೀಡುವುದು.
13) ಸಾಹಿತ್ಯಕ್ಕೆ ಸಂಬಂಧಪಟ್ಟ ಹಾಗೇ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ಹಾಗು ನಾಡಿನ ಎಲ್ಲಾ ಕವಿಗಳ ಪರಿಚಯ ಮಾಲಿಕೆ ಕಾರ್ಯಕ್ರಮ.
14) ನುರಿತ ತಜ್ಞರಿಂದ ಹಲವು ವಿಷಯಗಳನ್ನು ಕುರಿತ ಪ್ರಚಾರೋಪನ್ಯಾಸ ಮಾಲಿಕೆಗಳ ತಯಾರಿ ಮಾಡುವುದು.
15) ವಾರಂತ್ಯದಲ್ಲಿ KSOU ದೃಶ್ಯವಾಹಿನಿಯಲ್ಲಿ ವಿಶ್ವವಿದ್ಯಾನಿಲಯದ ಚಟುವಟಿಕೆಗಳ ಸುದ್ದಿಗಳು ಹಾಗು ಶೈಕ್ಷಣಿಕ ಸುದ್ದಿಗಳನ್ನು ಬಿತ್ತರಿಸುವುದು.

ಹೀಗೆ ವಿಶ್ವವಿದ್ಯಾನಿಲಯದಲ್ಲಿ ದೃಶ್ಯ ಸ್ಟುಡಿಯೋ ಶೈಕ್ಷಣಿಕ ಕಾರ್ಯಕ್ರಮಗಳು ಹಾಗು ಇನ್ನಿತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿದ್ದು ವಿದ್ಯಾರ್ಥಿ ಸ್ನೇಹಿಯಾಗಿ ಕಾರ್ಯ ನಿರ್ವಹಿಸುತ್ತ ವಿದ್ಯಾರ್ಥಿಗಳಿಗೆ ಬಹಳ ಸಹಕಾರಿಯಾಗಿದೆ.

### *Proceedings of the ICSSR Sponsored Short-term Empirical Research Project: 2023-24 One-Day National Workshop on "A Socio-economic Assessment of Pradhan Mantri Ujjwala Yojana in Rural Karnataka-Special Reference to Bangalore District" held on 16-03-2024.*





The workshop was inaugurated by Prof.H.R.Uma, Professor of Economics, University of Mysore, Sir.M.V.P.G Centre, Tubinakere, Mandya District, Karnataka, Dr.Rameshwarappa, K.A.S (Rtd.), Deputy Director of Food & Civil Supplies, Mysore District, Karnataka addressed the gathering. Dr.R.H.Pavithra, Associate Professor, Department of Studies & Research in Economics, Karnataka State Open University, Mukthagangotri, Mysore who is the Project Director ICSSR Sponsored Short-Term Empirical Research Project welcomed the guests and delegates arrived at the workshop and also gave a brief background of the workshop. All the dignitaries on the Stage inaugurated the One-Day National Workshop by lighting the gas stove (LPG) as a symbol of light in the life of Rural Women beneficiaries of PMUY.

Photo Caption: Prof.H.R.Uma, Professor, Department of Economics, Sir.M.V.PG Centre, Mandya District, Mandya Inaugurated the Workshop (L-5). Dr.K.Rameshwarappa, Deputy Director (Retd) Food & Civil Supplies Corporation, Government of Karnataka Addressed the Inaugural Function (L-5 Back). Hon'ble Vice-Chancellor Karnataka State Open University Prof.Sharanappa.V.Halse (L-4 Back), Prof. H.Vishwanath, Registrar (Evaluation), Karnataka State Open



University (L-6), and Dr.Ramanatham Naidu, Dean (Study Centres), Karnataka State Open University (L-1) presided the workshop. ICSSR Project Director and Workshop Organiser Dr.R.H.Pavithra, Associate Professor, Department of Studies & Research in Economics (L-2), KSOU, Dr.M.S.Ramananda, Chairman, Department of Studies & Research in Economics, KSOU (R-2) and other Beneficieris of Pradhan Mantri Ujjwala Yojana were present.

Professor H.R.Uma highlighted the crucial role of policies in effecting societal change, underscoring that meaningful transformation can only be achieved through well-designed programs. Among these, she highlighted the significance of the Pradhan Mantri Ujjwala Yojana (PMUY).

## ತುಮಕೂರಿನ ಕರಾಮುವಿ ಪ್ರಾದೇಶಿಕ ಕೇಂದ್ರ್ರದಲ್ಲಿ ಡಾ. ಬಿ.ಆರ್ ಅಂಬೇಡ್ಕರ್ ರವರ ಜಯಂತಿ ಆಚರಣೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಪ್ರಾದೇಶಿಕ ಕೇಂದ್ರ ತುಮಕೂರು ಕಛೇರಿಯಲ್ಲಿ ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ರವರ 133ನೇ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಪ್ರಾದೇಶಿಕ ನಿರ್ದೇಶಕರಾದ ಡಾ. ಲೋಕೇಶ. ಆರ್ ರವರು, ಸಿಬ್ಬಂದಿಗಳಾದ ಲಕ್ಷ್ಮಿಕಾಂತ್ ಮತ್ತು ಉಪನ್ಯಾಸಕರಾದ ಡಾ. ಸುರೇಶ್ ಸಿ. ರವರು ಭಾಗವಹಿಸಿದ್ದರು.



## ಸಂಪಾದಕ ಮಂಡಳಿ

* ಪ್ರೊ. ಶರಣಪ್ಪ ವಿ. ಹಲಸೆ, ಕುಲಪತಿಗಳು
* ಪ್ರೊ. ಕೆ.ಬಿ. ಪ್ರವೀಣ, ಕುಲಸಚಿವರು
* ಪ್ರೊ. ಎನ್. ಲಕ್ಷ್ಮಿ, ಡೀನ್ (ಶೈಕ್ಷಣಿಕ)
* ಪ್ರೊ. ಎಂ.ರಾಮನಾಥಂ ನಾಯುಡು, ಡೀನ್(ಅಧ್ಯಯನ ಕೇಂದ್ರ)
* ಡಾ. ಸಂತೋಷ್ ನಾಯಕ್ ಆರ್, ಸಂಪಾದಕರು
* ಡಾ. ಹರೀಶ.ಎನ್, ಉಪ ಸಂಪಾದಕರು
* ಡಾ. ಅವರೆಕಾಡು ವಿಜಯಕುಮಾರ್, ಉಪ ಸಂಪಾದಕರು
* ಡಾ. ಶೀಲಾ .ವಿ, ಉಪ ಸಂಪಾದಕರು
* ಶ್ರೀ ಮುನಿಸ್ವಾಮಿ , ಸಂಪಾದಕೀಯ ಸಹಕಾರ

ಬರಹಗಳನ್ನು ksounews@gmail.com ಗೆ ಕಳುಹಿಸುವುದು.
ವಿಳಾಸ
**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ**
**ಮುಕ್ತ ಗಂಗೋತ್ರಿ, ಮೈಸೂರು- 570006**
Website: www.ksoumysuru.ac.in
Facebook: www.facebook.com/ksoumysuru
Twitter: www.twitter.com/ksoumysuru

## ಪ್ರಕಟಣೆ

**ಕರಾಮುವಿಯ 2012-13 ಹಾಗೂ 2014-15 ಸಾಲಿನಲ್ಲಿ ಪ್ರವೇಶಾತಿ ಪಡೆದು ಪದವಿ ಹೊಂದಿದ ಕರಾಮುವಿ ಇನ್ ಹೌಸ್ ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣ, ನೇಮಕಾತಿ ಹಾಗೂ ಮುಂಬಡ್ತಿಗೆ ಪರಿಗಣಿಸತಕ್ಕದ್ದೆಂದು ರಾಜ್ಯ ಸರ್ಕಾರ 05.03.2018ರಲ್ಲಿ ಆದೇಶಿಸಿದ್ದು. ಈ ಸರ್ಕಾರಿ ಆದೇಶದ ಪ್ರತಿಯನ್ನು ಕರಾಮುವಿ ವೆಬ್‌ಸೈಟ್ ಮೂಲಕ ಪಡೆಯಬಹುದಾಗಿದೆ.**

# ಜನವರಿ ಆವೃತ್ತಿಯ ಪ್ರವೇಶಾತಿ ಪ್ರಕ್ರಿಯೆ



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2024ರ ಜನವರಿ ಆವೃತ್ತಿಯ ಪ್ರವೇಶಾತಿ ಪ್ರಕ್ರಿಯೆ ನಡೆಯುತ್ತಿದ್ದು, ದಿನಾಂಕ:15.03.2024 ರಂದು ಮಂಡ್ಯ ಪ್ರಾದೇಶಿಕ ಕೇಂದ್ರದ ವತಿಯಿಂದ ಹೆಮ್ಮನಹಳ್ಳಿ ಗ್ರಾಮ ಪಂಚಾಯಿತ್ತಿಯಲ್ಲಿ ಪ್ರವೇಶಾತಿಯ ಕುರಿತು ಹಮ್ಮಿಕೊಂಡಿದ್ದ ಪ್ರಚಾರ ಕಾರ್ಯಕ್ರಮದಲ್ಲಿ ಡೀನ್(ಅಧ್ಯಯನ ಕೇಂದ್ರ) ರವರಾದ ಪ್ರೊ.ಎಂ.ರಾಮನಾಥಂ ನಾಯುಡು ರವರು ಭಾಗವಹಿಸಿ, ವಿಶ್ವವಿದ್ಯಾನಿಲಯದ ಶೈಕ್ಷಣಿಕ ಕಾರ್ಯಕ್ರಮಗಳ ಬಗ್ಗೆ ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಪರಿಚಯಿಸಿ ಹಾಗೂ ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಶ್ರೀಮತಿ ವೀಣಾ ಮತ್ತು ಶ್ರೀಮತಿ ಲೀಲಾವತಿ PDO, ರವರಿಗೆ ಕರಪತ್ರಗಳನ್ನು ಅವರನ್ನು "ಪಂಚಾಯತ್ ರಾಜ್" Certificate Courser ನೋಂದಣಿಯಾಗುವಂತೆ ಪ್ರೋತ್ಸಾಹ ನೀಡಿದರು.

ಹಾಗೆಯೇ ಮಂಡ್ಯ ಜಿಲ್ಲೆಯ ಕೆ.ಎಂ.ದೊಡ್ಡಿಯಲ್ಲಿನ ಭಾರತಿ ಕಾಲೇಜಿಗೆ ಭೇಟಿನೀಡಿ ಕಾಲೇಜಿನ ಅಧ್ಯಕ್ಷರಾದ ಮಾನ್ಯ ಶ್ರೀ ಮಧುಮಾದೇಗೌಡ, MLC ರವರನ್ನು ಮತ್ತು ಅವರ ಸಿಬ್ಬಂದಿಗಳನ್ನು ಭೇಟಿಮಾಡಿ ವಿ.ವಿ.ಯ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳ ಹಾಗೂ Dual Degree ಕಾರ್ಯಕ್ರಮಗಳ ಬಗ್ಗೆ ಚರ್ಚಿಸುವುದರ ಜೊತೆಗೆ ಕಲಿಕಾರ್ಥಿ ಸಹಾಯ ಕೇಂದ್ರವನ್ನು ಸ್ಥಾಪಿಸಲು ಮೂಲಭೂತ ಸೌಕರ್ಯಗಳ ಬಗ್ಗೆ ಪರಿಶೀಲಿಸಿ ವಿಶ್ವವಿದ್ಯಾನಿಲಯಕ್ಕೆ ವರದಿಯನ್ನು ಸಲ್ಲಿಸಲಾಗಿದೆ.



# ಕೇಂದ್ರ ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಭೇಟಿ

ದಿನಾಂಕ: 24-03-2024ರ ಭಾನುವಾರದಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಂದಿದ್ದ ಕೇಂದ್ರ ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್‌ರವರನ್ನು ಡೀನ್(ಅಧ್ಯಯನ ಕೇಂದ್ರ) ರವರಾದ ಎಂ.ರಾಮನಾಥಂ ನಾಯುಡು ರವರು ಭೇಟಿ ಮಾಡಿ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಕಾರ್ಯಕ್ರಮಗಳ ಬಗ್ಗೆ ಪರಿಚಯಿಸಲಾಯಿತು.